**ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಗರಿಷ್ಠ ಮೂರು ಭ್ರೂಣಗಳನ್ನು ಮಾತ್ರ ಗರ್ಭಾಶಯಕ್ಕೆ ಸೇರಿಸಬೇಕು. ಆದರೆ 9 ಭ್ರೂಣಗಳವರೆಗೂ ವರ್ಗಾವಣೆ ಮಾಡಿ, ನಂತರ 1–2 ಭ್ರೂಣ ಉಳಿಸಿಕೊಂಡು ಉಳಿದವುಗಳನ್ನು ನಾಶಪಡಿಸುವ ಪ್ರಕ್ರಿಯೆ ಗರ್ಭಿಣಿಗೆ ಅಪಾಯಕಾರಿ.**



## ಬಾಡಿಗೆ ತಾಯ್ತನದ ಪ್ರಕ್ರಿಯೆ

ಮಕ್ಕಳಿಲ್ಲದ ದಂಪತಿ ತಮ್ಮದೇ ಅಂಡಾಣು–ವೀರ್ಯಾಣುವಿನಿಂದ ಮಗುವನ್ನು ಬಾಡಿಗೆ ತಾಯಿಯ ಗರ್ಭದಲ್ಲಿ ಬೆಳೆಸಿದ ಪ್ರಕರಣ ಅಪರೂಪ. ತಂದೆಯ ವೀರ್ಯಾಣು ಹಾಗೂ ಇನ್ನೊಬ್ಬ ಮಹಿಳೆಯಿಂದ ದಾನವಾಗಿ ಪಡೆದ ಅಂಡಾಣುವನ್ನು ಅಥವಾ ಅಂಡಾಣು ಹಾಗೂ ವೀರ್ಯಾಣು ಎರಡನ್ನೂ ಬೇರೆಯವರಿಂದ ಪಡೆದು ಐವಿಎಫ್ (ಇನ್ ವಿಟ್ರೋ ಫರ್ಟಿಲೈಜೇಶನ್– ಪ್ರನಾಳ ಶಿಶು) ತಂತ್ರಜ್ಞಾನದ ಮೂಲಕ ಪ್ರಯೋಗಾಲಯದಲ್ಲಿ ಭ್ರೂಣವನ್ನಾಗಿ ಬೆಳೆಸಲಾಗುವುದು. ಸಾಮಾನ್ಯವಾಗಿ ಯಶಸ್ಸಿನ ಪ್ರಮಾಣ ಹೆಚ್ಚಿಸಲು ಒಂದಕ್ಕಿಂತ ಅಧಿಕ ಭ್ರೂಣಗಳನ್ನು ಬೆಳೆಸಲಾಗುವುದು.

ಈ ಭ್ರೂಣಗಳನ್ನು ಬಾಡಿಗೆ ತಾಯಿಯ ಗರ್ಭದಲ್ಲಿ ಸೇರಿಸಲಾಗುವುದು. ಎಲ್ಲಾ ಭ್ರೂಣಗಳು ಗರ್ಭದಲ್ಲಿ ಸ್ಥಾಪಿತವಾಗಿ ಆರೋಗ್ಯಕರವಾಗಿದ್ದರೆ, ಮೂರು ತಿಂಗಳೊಳಗೆ ಒಂದು ಅಥವಾ ಎರಡು ಭ್ರೂಣಗಳನ್ನು ಅಲ್ಲಿಯೇ ಬಿಟ್ಟು ಉಳಿದವುಗಳನ್ನು ನಾಶಪಡಿಸಲಾಗುವುದು.




ಹಣದ ಸಲುವಾಗಿ ಗರ್ಭವನ್ನು ಬಾಡಿಗೆಗೆ ನೀಡುವುದರ ಹಿಂದೆ ಕುಟುಂಬದ ಒತ್ತಡವೇ ಹೆಚ್ಚು. ಇದನ್ನು ಕಾನೂನು ಅಡಿಯಲ್ಲಿ ಹೆಚ್ಚು ಕ್ಲಿಷ್ಟಕರವಾಗುವಂತೆ ಮಾಡುವುದರಿಂದ ಹೆಣ್ಣಿನ ಶೋಷಣೆ ತಪ್ಪಿಸಬಹುದು ಎಂಬುದು ನಮ್ಮ ನಿರೀಕ್ಷೆ' ಎಂದು ಕರಡು ಮಸೂದೆ ರೂಪಿಸುವಲ್ಲಿ ನೆರವು ನೀಡಿದ ಭಾರತೀಯ ವೈದ್ಯಕೀಯ ಸಂಶೋಧನ ಮಂಡಳಿಯ ಮುಖ್ಯಸ್ಥೆ ಸೌಮ್ಯ ಸ್ವಾಮಿನಾಥನ್ ಮಸೂದೆ ಸಚಿವ ಸಂಪುಟದ ಮುಂದೆ ಬಂದಾಗ ಹೇಳಿದ್ದನ್ನು ಇಲ್ಲಿ ನೆನಪಿಸಬಹುದು.

ಹೆಚ್ಚಿನ ಯುವತಿಯರಿಗೆ ವೈದ್ಯಕೀಯ ಪ್ರಕ್ರಿಯೆಗಳ ಬಗ್ಗೆಯೂ ಅರಿವಿರುವುದಿಲ್ಲ. ಶುಚಿಯಿಲ್ಲದ ಜಾಗದಲ್ಲಿ ಈ ಐವಿಎಫ್ ಪ್ರಕ್ರಿಯೆ ನಡೆಸುವ ಹಲವು ಕ್ಲಿನಿಕ್‌ಗಳಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಆಕ್ಷೇಪ ವ್ಯಕ್ತಪಡಿಸಿತ್ತು. ಕೆಲವೊಮ್ಮೆ ಈ ಕ್ಲಿನಿಕ್‌ಗಳು ಬಾಡಿಗೆ ತಾಯಂದಿರ ಜೀವಕ್ಕೂ ಅಪಾಯ ಒಡ್ಡುತ್ತವೆ. ಮಗುವನ್ನು ಪಡೆಯುವ ವಿದೇಶಿ ದಂಪತಿಯ ಅನುಕೂಲಕ್ಕೆ ತಕ್ಕಂತೆ ಹೆರಿಗೆ ದಿನಾಂಕವನ್ನೂ ವೈದ್ಯರೇ ನಿರ್ಧರಿಸಿಬಿಡುತ್ತಾರೆ. ಅಂದರೆ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸುವುದರಿಂದ ಶುಚಿತ್ವದ ಕೊರತೆ ಇರುವ ಆಸ್ಪತ್ರೆಗಳಲ್ಲಿ ಸೋಂಕಿಗೆ ಒಳಗಾಗುವ ಅಪಾಯವೂ ಇರುತ್ತದೆ. ಹೆರಿಗೆ ನಂತರ ಅವರಿಗೆ ನೀಡುವ ಆರೋಗ್ಯ ಸೇವೆಯೂ ಅಷ್ಟಕ್ಕಷ್ಟೇ.

ಕೆಲವೊಮ್ಮೆ ಗರ್ಭ ನಿಲ್ಲುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭ್ರೂಣಗಳನ್ನು ಗರ್ಭಕ್ಕೆ ಸೇರಿಸುವುದೂ ಇದೆ. ಕೃತಕ ಗರ್ಭಧಾರಣಾ ತಂತ್ರಜ್ಞಾನದ ಮಾರ್ಗದರ್ಶಿಸೂತ್ರಗಳ ಪ್ರಕಾರ ಗರಿಷ್ಠ ಮೂರು ಭ್ರೂಣಗಳನ್ನು ಮಾತ್ರ ಸೇರಿಸಬೇಕು. ಆದರೆ 9 ಭ್ರೂಣಗಳವರೆಗೂ ವರ್ಗಾವಣೆ ಮಾಡಿ, ನಂತರ ಗರ್ಭಾಶಯದಲ್ಲಿ ಭ್ರೂಣ ಬೆಳೆಯುವುದು ಖಚಿತಪಡಿಸಿಕೊಂಡ ನಂತರ ಒಂದೋ, ಎರಡೋ ಭ್ರೂಣ ಉಳಿಸಿಕೊಂಡು ಉಳಿದವುಗಳನ್ನು ಗರ್ಭಪಾತ ಮಾಡುವ ಕಾರ್ಯ ನಡೆಯುತ್ತದೆ. ಇದು ತಾಯಿಯ ಆರೋಗ್ಯಕ್ಕೆ ಮಾರಕವಾಗಬಹುದು.

ಅಂಡಾಣು ದಾನ ಮಾಡುವ ಯುವತಿಯರಿಗೂ ಈ ಕ್ಲಿನಿಕ್‌ಗಳು ಸರಿಯಾದ ಮಾಹಿತಿ ನೀಡಿರುವುದಿಲ್ಲ. ಅಂಡಾಣು ಪಡೆಯಬೇಕಾದರೆ ಹಾರ್ಮೋನ್ ಚುಚ್ಚುಮದ್ದು ನೀಡಲಾಗುತ್ತದೆ. ಆದರೆ ಪದೇ ಪದೇ ಈ ರೀತಿ ಹಾರ್ಮೋನ್